3. ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ತೊಂದರೆ ಇದ್ದು ಅಲ್ಲಿಗೆ ಕೂಡಲೇ ಕೊಳವೆ ಬಾವಿಗಳನ್ನ ತೋಡಿಸಿ ವಿದ್ಯಾರ್ಥಿಗಳಿಗೆ ಅನುಕೂಲತೆ ಮಾಡಿಕೊಡಲು ಸರ್ಕಾರದವರು ಕ್ರಮಕೈಗೊಳ್ಳುವರೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

ಅ. ಇಲ್ಲ

ಆ. ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಶಾಲೆಗಳಿಗೆ ಸೀಮಿತವಾಗಿ ಕೊಳ ಬಾವಿಗಳನ್ನು ಒದಗಿಸಿರುವುದಿಲ್ಲ. ಹಳ್ಳಿಯ ಎಲ್ಲಾ ಸಾರ್ವಜನಿಕ ಉಪಯೋಗಕ್ಕಾ ಒದಗಿಸಲಾಗುವುದು.

ಡಂಕಲ್ ಡ್ರಾಫ್ಟ್ ಅನುಷ್ಠಾನ ಕುರಿತು

(1979): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿ ದಯವಿಟ್ಟು ಉತ್ತರಿಸುವರೇ ?

ಅ. ಡಂಕಲ್ ಡ್ರಾಫ್ಟ್ ರಾಜ್ಯದ ರೈತರಿಗೆ ಮಾರಕವಾಗಿದೆ ಎಂಬ ಅಭಿಪ್ರಾಯ ರೈತ ಸಮುದಾಯ ಉಂಟಾಗಿರುವುದು ಸರ್ಕಾರವು ಗಮನಿಸಿದೆಯೆ;

ಆ. ಡಂಕಲ್ ಡ್ರಾಫ್ಟ್ ಅನುಷ್ಠಾನದ ಬಗ್ಗೆ ಸರ್ಕಾರವು ಏನಾದರೂ ನಿಲುವನ ತೆಗೆದುಕೊಂಡಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಸರ್ಕಾರದ ಗಮನಕ್ಕೆ ಬಂದಿದೆ

ಆ. "ಡಂಕಲ್ ಡ್ರಾಫ್ಟ್" ಬಗ್ಗೆ ಇನ್ನು ಕೇಂದ್ರ ಸರ್ಕಾರವು ಮಾತುಕತೆ ನಡೆಸುತ್ತಿರುವುದರಿಂ ಇದರ ಪರಿಣಾಮದ ಬಗ್ಗೆ ಈಗ ಸಮೀಕ್ಷಿಸುವುದು ಅಕಾಲಿಕವಾಗುತ್ತದೆ. ಆದರೂ, ರೈತರ ಹಿತವನ ರಕ್ಷಿಸಲು ಮತ್ತು ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲು ರಾ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸುವುದು

(1982): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ತೋಟಗಾರಿಕೆ ರಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ತೋಟಗಾರಿಕೆ ವ್ಯವಸಾಯವನ್ನು ಹೆಚ್ಚಿಸ ಸರ್ಕಾರದ ಕಾರ್ಯಕ್ರಮಗಳೇನು;

ಆ. ಹಿಡಕಲ್ ಜಲಾಶಯದಲ್ಲಿರುವ ಹಾರ್ಟಿಕಲ್ಚರಲ್ ಉದ್ಯಾನವನ್ನು ಗಣನೆಗೆ ತೆಗೆದುಕೊಂ ಹಾರ್ಟಿಕಲ್ಚರಲ್ ಕಾಲೇಜು ಸ್ಥಾಪಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು;

ಇ. ಉತ್ತರ ಕರ್ನಾಟಕದಲ್ಲಿ ಹಣ್ಣು ಬೇಸಾಯ ಅಭಿವೃದ್ಧಿಗಾಗಿ ಒಳ್ಳೆಯ ಮಾವಿನ ತಳಿ, ಸಪೋ ತಳಿ, ಹಾಗೂ ಪೇರಲ ಹಣ್ಣು ಹಾಗೂ ಇದೇ ತರಹದ ಹಲವಾರು ಹಣ್ಣು ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳಲು, ಹಮ್ಮಿಕೊಂಡಿರುವ ವಿಶೇಷ ಯೋಜನೆ ಏನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. 1992–93ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯು ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆಯ ಅಭಿವೃದ್ಧಿಗೆ ಒಟ್ಟು 63 ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಕ್ಕಾಗಿ ಯೋಜನಾ ವೆಚ್ಚದಲ್ಲಿ 1752.80 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ 1992–93ನೇ ಸಾಲಿನಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸಂಬಂಧಿಸಿದಂತೆ 19 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಯೋಜನೆಯ ವೆಚ್ಚ ಸುಮಾರು 30.37 ಲಕ್ಷ ರೂಪಾಯಿಗಳಾಗಿರುತ್ತದೆ.

ಆ. ಸದ್ಯದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ. ಉತ್ತರ ಕರ್ನಾಟಕದ 8 ಜಿಲ್ಲೆಗಳಲ್ಲಿ ಮಾವು, ದಾಳಿಂಬೆ, ಸಪೋಟ, ಪೇರಲ, ಇತ್ಯಾದಿ ಹಣ್ಣಿನ ಗಿಡಗಳನ್ನು ಉತ್ತಮ ಗುಣಮಟ್ಟದ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ಉತ್ಪಾದಿಸಿ ವಿತರಿಸುವ ಉಳಿದ ಯೋಜನೆಯಡಿಯಲ್ಲಿ ಹಾಗೂ ಯೋಜನೇತರ ಅಡಿಯಲ್ಲಿ ಇಲಾಖಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ಇತರಿಗೆ ಒದಗಿಸಲಾಗುತ್ತಿದೆ.

Amount of Pension paid to Ex–Patels and Ex. Shanbhogues

1984): Sri B.H. Lakshmanaiah (Belur):– Will the Minister for Revenue be leased to state

a. What is the amount of pension to Ex–Patels and also to x–Shanbhogues;

b. Whether Govt. is aware that Ex–Patels worked in Govt. service on par ith Shanbhogues? If so, why discrimination in the payment of pension?

Sri M. Rajashekhara Murthy (Minister for Revenue):–

a. 1) Compassionate Allowance of Rs. 100/– P.M. to Ex–Patels.
Compassionate Allowance of Rs. 100/– P.M. to Ex–Shanbhogues who ere on duty as on 1–2–63.
Rs. 500/– P.M. as Ad–hoc Pension is being paid to the Ex–Shanubhogues ho were continued as Village Accountant under sec. 16 (2) of the Land evenue Act either retired on super–annuation or replaced by new cumbents appointed under Sec. 16 (1) of the Land Revenue Act.

b. Yes. As stated above ad–hoc pension is being paid on the basis of e orders of the High court and the settlement entered into by the overnment.